ಬೋಧಿಸುತ್ತೇನೆ. ನನಗೆ ಏಳು ವರ್ಷದ ಒಬ್ಬ ಮಗನಿದ್ದಾನೆ. ಕುಕಿಂಗ್, ಡಾನ್ಸಿಂಗ್, ಸ್ವಿಮಿಂಗ್ ನನ್ನ ಆಸಕ್ತಿಗಳಾಗಿವೆ. ಈ ತಿಂಗಳ ಹದಿನೇಳರಂದು, ಇಪ್ಪತ್ತೊಂಬತ್ತಕ್ಕೆ ಕಾಲಿಡುತ್ತಿದ್ದೇನೆ ಎಂದು ನನ್ನ ಬಗ್ಗೆ ಹೇಳಿದೆ.

ಅವನು ತನ್ನ ಬಗ್ಗೆ, 'ನಾನು ಇಂಜಿನಿಯರ್, ಇಬ್ಬರೊಂದಿಗೆ ಸೇರಿ ಐಟಿ ಬಿಜಿನೆಸ್ ಮಾಡುತ್ತಿದ್ದೇನೆ, ಸ್ಟಾರ್ಟ್‌ಅಪ್ ಕಂಪನಿಯಾಗಿದೆ, ಬಿಸಿಲು ಕಾಯಿಸಲು ನಾನು ಕೀನ್ಯಾಕ್ಕೆ ಬಂದಿದ್ದೇನೆ' ಎಂದ.

'ಬಿಸಿಲು ಕಾಯಿಸಲು!'

'ಹೌದು, ಆಫ್ರಿಕನ್ ದೇಶಗಳಲ್ಲಿ ಸೂರ್ಯ ಕೃಪೆ ತೋರುತ್ತಾನೆ. ಯೂರೋಪಿನಲ್ಲಿ ಅವನು, ವಿಶೇಷವಾಗಿ ಚಳಿಗಾಲದಲ್ಲಿ, ಎರಡು ಮೂರು ತಿಂಗಳು ಕಣ್ಮರೆಯಾಗುತ್ತಾನೆ. ಸೂರ್ಯನ ದರ್ಶನಕ್ಕೆ ನಾವು ಏಷ್ಯಾ ಅಥವಾ ಆಫ್ರಿಕಾಕ್ಕೆ ಬರುತ್ತೇವೆ.'

ನನಗೆ ಅವನ ವ್ಯಂಗ್ಯ ಹಿಡಿಸಿತು. ತನ್ನ ವಯಸ್ಸು ಮೂವತ್ತೈದು, ಇಬ್ಬರು ಮಹಿಳೆಯರೊಂದಿಗೆ ರಿಲೇಶನ್‌ಶಿಪ್‌ನಲ್ಲಿದ್ದೆ, ಆದರೆ ಮದುವೆಯಾಗಲಿಲ್ಲ, ಮಕ್ಕಳೂ ಇಲ್ಲ. ತನಗೆ ಫೋಟೋಗ್ರಫಿ ಮತ್ತು ಡ್ರೈವಿಂಗ್‌ನಲ್ಲಿ ಆಸಕ್ತಿಯಿದೆ ಎಂದೂ ಹೇಳಿದ.

ನಾನು ಅವನನ್ನು ಇಷ್ಟಪಡಲಾರಂಭಿಸಿದ್ದೆ. ಆದರೆ ಈಗ ನನ್ನನ್ನು ಸಂಯಮದಲ್ಲಿಟ್ಟುಕೊಂಡೆ, ನನ್ನ ಭಾವನೆಗಳನ್ನು ವ್ಯಕ್ತಪಡಿಸಲಿಲ್ಲ. ನಂತರ ಒಂದು ದಿನ ನನ್ನ ಮನೆಯಲ್ಲಿ ಪಾರ್ಟಿಯೊಂದನ್ನು ಏರ್ಪಡಿಸಿದೆ. ಅವನನ್ನೂ ಆಹ್ವಾನಿಸಿದೆ. ಅಬ್ರಾಹಮ್‌ನೊಂದಿಗೆ ಭೇಟಿ ಮಾಡಿಸಿದೆ.

ತದನಂತರದಲ್ಲಿ ಅವನ ಮೆಸೇಜ್‌ಗಳು ಬರಲಾರಂಭಿಸಿದವು. ಅವನ ಮೆಸೇಜ್‌ಗಳು ಮತ್ತು ಫೋನ್ ಕಾಲ್‌ಗಳು ಬಂದಾಗ ನನಗೆ ಸಂತಸವಾಗುತ್ತಿತ್ತು. ನಾವಿಬ್ಬರು ಉತ್ತಮ ಮಿತ್ರರಾದೆವು. ಅವನು ನನ್ನೊಂದಿಗೆ ಪ್ರತಿಯೊಂದು ವಿಷಯವನ್ನು ಶೇರ್ ಮಾಡಿಕೊಳ್ಳುತ್ತಿದ್ದ.

ಸಾಮಾನ್ಯವಾಗಿ ತನ್ನ ಕೀನ್ಯಾ ಪ್ರವಾಸದ ಮಜಾ ಕೊಡುವ ಸಂಗತಿಗಳನ್ನು ಹೇಳುತ್ತಿದ್ದ. ತನ್ನ ಚಿಂತೆಗಳನ್ನೂ ಪ್ರಸ್ತಾಪಿಸುತ್ತಿದ್ದ. ನಾನು ಅವನಿಗೆ ಸಹಾಯವನ್ನು ಮಾಡುತ್ತಿದ್ದೆ, ಏಕೆಂದರೆ ನಾನು ಕೀನ್ಯಾಕ್ಕೆ ಬಂದು ಒಂದು ವರ್ಷವಾಗಿತ್ತು, ನಾನು ಈ ದೇಶದ ಅನೇಕ ವಿಷಯಗಳ ಬಗ್ಗೆ ಪರಿಚಿತಳಾಗಿದ್ದೆ. ನಾನೂ ಸಹ ನನ್ನನ್ನು ಕೀನ್ಯಾದವಳೆಂದು ಹೇಳಿಕೊಳ್ಳುತ್ತಿದ್ದೆ.

ನಾನು ಲಾರ್ಸ್‌ನ ಮತ್ತೂ ಸಮೀಪಕ್ಕೆ ಹೋದಾಗ ಅವನಿಗೆ, ನಾನು ನನ್ನ ಪತಿಯೊಂದಿಗೆ ಸಂತೋಷವಾಗಿಲ್ಲ, ಅವನೊಂದಿಗಿದ್ದೂ ಅವನಿಂದ ದೂರದ ಬದುಕನ್ನು ನಡೆಸುತ್ತಿದ್ದೇನೆ, ಅವನಿಂದ ಬೇರೆಯಾಗಲು ಬಯಸುತ್ತೇನೆ ಎಂದೆ. ನಾನು ಹೀಗೆ ಹೇಳಿದ ನಂತರ ಅವನು ಮತ್ತೂ ತೆರೆದುಕೊಂಡ. ನಮ್ಮ ಡೇಟಿಂಗ್ ಆರಂಭವಾದವು. ಅದೆಷ್ಟೋ ಬಾರಿ ಅಬ್ರಾಹಮ್‌ನ ಅನುಪಸ್ಥಿತಿಯಲ್ಲಿ ನಾವು ಮನೆಯಲ್ಲಿಯೇ ಭೇಟಿಯಾದೆವು. ನಾನು ಅಬ್ರಾಹಮ್‌ಗೆ ವಂಚಿಸುತ್ತಿದ್ದೇನೆ, ಅವನಿಗೆ ಮೋಸ ಮಾಡುತ್ತಿದ್ದೇನೆ ಎಂಬುದು ನನಗೆ ತಿಳಿದಿತ್ತು. ಆದರೆ ನಾನೇನು ಮಾಡುವುದು? ಇಂಥ ಪಥಭ್ರಷ್ಟ ಪತಿಯಿಂದ ಬಿಡುಗಡೆಯನ್ನು ಪಡೆಯಲು ನನಗೊಂದು ದಡ ಬೇಕಿತ್ತು, ಲಾರ್ಸ್ ನನಗೆ ಚುಕ್ಕಾಣಿಯಂತೆ ಕಂಡ. ಮನಸ್ಸಿನಲ್ಲಿ ಮಿಶ್ರಿತ ಭಾವನೆಗಳು ಉದ್ಭವಿಸುತ್ತಿದ್ದವು. ನಾನು ಮಾಡುತ್ತಿರುವುದರ ಬಗ್ಗೆ, ಪರ ಪುರುಷನೊದಿಗೆ ಆಟವಾಡುತ್ತಿರುವ ಬಗ್ಗೆ ಆತ್ಮಗ್ಲಾನಿಯಾಗುತ್ತಿತ್ತು. ನ್ಯಾನ್ಸಿ, ನೀನು ಒಬ್ಬ ಪ್ರಾಮಾಣಿಕ, ಗೌರವಸ್ಥ ಕೋಶಿ ಮ್ಯಾಥ್ಯೂನ ಮಗಳಾಗಿ ಅಪವಿತ್ರ ಕೆಲಸವನ್ನು ಮಾಡುತ್ತಿದ್ದೀಯ ಎಂದು ನನ್ನನ್ನು ನಾನೇ ಹಳಿದುಕೊಳ್ಳುತ್ತಿದ್ದೆ. ಆದರೆ ಅದರೊಂದಿಗೆ ಮನಸ್ಸಿಗೆ, ನಾನು ನನ್ನೊಂದಿಗೆ ನಡೆಯುತ್ತಿರುವ ಅನ್ಯಾಯದ ವಿರುದ್ಧ ಹೆಜ್ಜೆಗಳನ್ನಿಡುತ್ತಿರುವೆ ಎಂದು ಸಮಾಧಾನವಾಗುತ್ತಿತ್ತು.

ಅದೊಂದು ದಿನ ನಾನು ಲಾರ್ಸ್‌ನನ್ನು ಮನೆಗೆ ಆಹ್ವಾನಿಸಿದ್ದೆ. ನಾವಿಬ್ಬರು ಮಾತ್ರ ಮನೆಯಲ್ಲಿದ್ದೆವು. ಅಬ್ರಾಹಮ್ ಕೆಲಸವೊಂದರ ನಿಮಿತ್ತ ನೈರೋಬಿಗೆ ಹೋಗಿದ್ದ. ಜೋಶುಆ ತನ್ನ ಫುಟ್‌ಬಾಲ್ ಲೇಶನ್‌ನಲ್ಲಿದ್ದ. ಲಾರ್ಸ್ ನನ್ನನ್ನು ತನ್ನ ಬಾಹುಗಳಲ್ಲಿ ಬಂಧಿಸಿಕೊಂಡು ಹೇಳಿದ, 'ನ್ಯಾನ್ಸಿ, ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ. ನೀನಿಲ್ಲದೆ ನಾನಿರಲಾರೆ. ನನ್ನೊಂದಿಗೆ ಡೆನ್ಮಾರ್ಕ್‌ಗೆ ಬರುತ್ತೀಯಾ?'

ನನ್ನ ಕಣ್ಣುಗಳಲ್ಲಿ ಕಣ್ಣೀರು ತುಂಬಿ ಬಂತು... ಅದು ಖುಷಿಯ ಕಣ್ಣೀರಾಗಿತ್ತು... 'ನನ್ನೊಂದಿಗೆ ಡೆನ್ಮಾರ್ಕ್‌ಗೆ ಬರುತ್ತೀಯಾ?' ಎಂಬ ಲಾರ್ಸ್‌ನ ಈ ಮಾತು ತುಂಬಾ ಮನಮೋಹಕವಾಗಿತ್ತು. ಅವನ ಈ ಮಾತು ನನ್ನ ಹೃದಯವನ್ನು ಹಗುರಗೊಳಿಸಿತು. ನಿಜ ಹೇಳಬೇಕೆಂದರೆ, ನಾನು ಕೀನ್ಯಾದಿಂದ ದೂರ, ಅಬ್ರಾಹಮ್‌ನಿಂದ ತುಂಬಾ ದೂರಕ್ಕೆ ಹೋಗಲು ಬಯಸುತ್ತಿದ್ದೆ.

ನಾನೂ ಸಹ ಲಾರ್ಸ್‌ಗೆ ನನ್ನ ಹೃದಯದ ಮಾತನ್ನು ಹೇಳಿದೆ. ಅವನನ್ನು ಅಪ್ಪಿಕೊಂಡು 'ಐ ಲವ್ ಯೂ – ನಾಕಪೇಂದಾ ಪಿಯಾ!' ಎಂದೆ. ಅಂದು ನಾವು ಎಲ್ಲಾ ಎಲ್ಲೆಯನ್ನು ಮೀರಿದೆವು. ನಂತರ ಸಮಯ ಸಿಕ್ಕಾಗ ಇದು ಪುನರಾವರ್ತನೆಯಾಗುತ್ತಿತ್ತು.

ಮೊಮ್ಬಾಸಾದಲ್ಲಿ ತನ್ನ ದಿನಗಳನ್ನು ಕಳೆದು ಲಾರ್ಸ್ ಡೆನ್ಮಾರ್ಕ್‌ಗೆ ಮರಳಿ ಹೋದ. ನನ್ನ ಮತ್ತು ಅವನ ರಿಮೋಟ್ ಡೇಟಿಂಗ್ ನಡೆಯುತ್ತಿತ್ತು. ಕೆಲವು ತಿಂಗಳುಗಳ ನಂತರ ನಾವು ನಮ್ಮ ಸಂಬಂಧವನ್ನು ಮುಂದಿನ ಹಂತಕ್ಕೆ ಒಯ್ಯಲು ನಿರ್ಧರಿಸಿದೆವು.

ಆಗ ನನ್ನ ಮಗ ಜೋಶುಆ ಏಳು ವರ್ಷದವನಾಗಿದ್ದ. ನನ್ನ ಮಗನಿಗೂ ನಾನೆಲ್ಲವನ್ನೂ ಹೇಳಬೇಕಿತ್ತು. ಇದು ನನ್ನ ಅತ್ಯಂತ ದುರ್ಬಲ ನಾಡಿಯಾಗಿತ್ತು, ಇದು ಸುಲಭವಾಗಿರಲಿಲ್ಲ, ಹೇಳಲು ಅಸಹಜತೆಯನ್ನು ಮನಗಾಣುತ್ತಿದ್ದೆ. ಆದರೆ ನನಗೆ ಜೋಶುಆಗೆ ವಾಸ್ತವಿಕತೆಯನ್ನು ಹೇಳುವ ಸಮಯ ಇದಾಗಿದೆ ಎಂದು ಅನ್ನಿಸಿತು. ಕೆಲವು ಭಾವನೆಗಳನ್ನು ಸುಳ್ಳು ಮಾಡಲಾಗದು. ನಾನು ಅವನಿಗೆ ಎಲ್ಲಾ ನಿಜಾಂಶವನ್ನೂ ಹೇಳಿದೆ; ನಿನ್ನ ತಾಯಿ ನಿನ್ನ ತಂದೆಯೊಂದಿಗೆ ಸಂತಸದಿಂದಿಲ್ಲ, ನಾನು ಅವರನ್ನು ಬಿಟ್ಟು ಹೋಗುವ ತೀರ್ಮಾನವನ್ನು ಈ ಹಿಂದೆಯೇ ತೆಗೆದುಕೊಂಡಿದ್ದೆ, ಲಾರ್ಸ್ ಇದಕ್ಕೆ ಮುದ್ರೆಯೊತ್ತಿದ್ದಾನೆ, ನಾನೀಗ ಕಾನೂನಿನಂತೆ ನಿನ್ನ ತಂದೆಯಿಂದ ಬೇರೆಯಾಗಲು ಬಯಸುತ್ತೇನೆ. ಪಾಪದ ಕೊಡ ತುಂಬಿದಾಗ ಮನುಷ್ಯತ್ವ ಕಿರುಚುತ್ತದೆ, ವಿದ್ರೋಹ ಎದ್ದು ನಿಲ್ಲುತ್ತದೆ ಎಂದೆಲ್ಲಾ ಹೇಳಿದೆ.

ಜೋಶುಆ ವಯಸ್ಸಿಗಿಂತ ಹೆಚ್ಚು ಮಾಗಿದ್ದ, ಅವನಿಗೆಲ್ಲವೂ ಅರ್ಥವಾಯಿತು. ತನ್ನ ತಾಯಿ ತನ್ನ ತಂದೆಯೊಂದಿಗೆ ಖುಷಿಯಿಂದ ಇಲ್ಲ, ಎಲ್ಲವೂ ಸರಿಯಿಲ್ಲವೆಂದು ಅವನಿಗೆ ತಿಳಿದಿತ್ತು.

ನಾನು ನನ್ನ ಸಲಹೆಗಾರ್ತಿಯಾದ ಮೌರೀನ್ ಟಾಡ್‌ರ ಬಳಿಗೆ ಹೋಗಿ ಹೇಳಿದೆ, 'ಮೌರೀನ್ ಶಂಗಜಿ, ಮನುಷ್ಯ ತನಗೆ ಮನೆಯಲ್ಲಿ ಸಿಗದ ವಸ್ತುವಿಗಾಗಿ ಹೊರಗೆ ಹೋಗುತ್ತಾನೆ ಎಂದು ನೀವೊಮ್ಮೆ ಹೇಳಿದ್ದಿರಿ... ನನಗೆ ಯಾವುದು ಮನೆಯಲ್ಲಿ ಸಿಗಲಿಲ್ಲವೋ, ಅದನ್ನು ನಾನು ಹೊರಗೆ ಹುಡುಕಿಕೊಂಡೆ.'

ಮೌರೀನ್ ಕ್ಷಣ ಕಾಲ ನನ್ನನ್ನು ಆಶ್ಚರ್ಯದಿಂದ ನೋಡಿ ಹೇಳಿದರು, 'ಯಾರಾದರೂ ಸಿಕ್ಕರೇ...?'

ನಾನು ಮೌರೀನರಿಗೆ ಲಾರ್ಸ್ ಬಗ್ಗೆ ಎಲ್ಲವನ್ನೂ ಹೇಳಿದೆ. ಅವನ ಫೋಟೋಗಳನ್ನು ತೋರಿಸಿದೆ. ಮೌರೀನರಿಗೆ ಆಶ್ಚರ್ಯವಾಯಿತು, 'ನೀನು ಇಲ್ಲಿಂದ ಹೊರಟು ಹೋಗುತ್ತೀಯಾ? ನನ್ನನ್ನು ಏರ್‌ಪೋರ್ಟ್‌ಗೆ ಬಿಡುವವರು ಯಾರು, ಕರೆತರುವವರು ಯಾರು?'

ಮೌರೀನರು ತಮ್ಮ ಮಕ್ಕಳ ಬಳಿಗೆ ಅಥವಾ ಬೇರೆಲ್ಲಿಗಾದರು ಹೋಗಬೇಕೆಂದಿದ್ದಾಗ, ನಾನು ಸದಾ ಅವರನ್ನು ಏರ್‌ಪೋರ್ಟ್‌ಗೆ ಹೋಗಿ ಬಿಡುತ್ತಿದ್ದೆ, ಮರಳಿ ಬಂದಾಗ ಕರೆತರುತ್ತಿದ್ದೆ.

'ನಿಮ್ಮನ್ನು ಏರ್‌ಪೋರ್ಟ್‌ಗೆ ಬಿಡಲು ಕರೆತರಲು ಇಲ್ಲಿ ತುಂಬಾ ಜನರಿದ್ದಾರೆ. ಅಲ್ಲಿ ನೀವಿಲ್ಲದೆ ನನ್ನ ಪರಿಸ್ಥಿತಿ ಏನಾಗುವುದು?'

ಮೌರೀನರು ದಾರ್ಶನಿಕ ಅಂದಾಜಿನಲ್ಲಿ ಹೇಳಿದರು, 'ನಿನಗೂ ಸಹ ಅಲ್ಲಿ ಹೊಸ ಜನ ಸಿಗುತ್ತಾರೆ. ಹೊಸ ಕ್ಷಿತಿಜ ಸಿಗುವುದು. ಹೊಸ ಸಮುದ್ರ ಸಿಗುವುದು. ನೀನು ನನ್ನನ್ನು ಮರೆತು ಬಿಡುತ್ತೀಯ.'

'ಮೌರೀನ್ ಶಂಗಜೀ, ನಾನೆಂದೂ ನಿಮ್ಮನ್ನು ಮರೆಯಲಾರೆ...'

ಮೌರೀನ್ ನನ್ನನ್ನು ಬರಸೆಳೆದು ಅಪ್ಪಿಕೊಂಡರು. ನನಗೆ ಶುಭವನ್ನು ಹಾರೈಸಿದರು, ನನ್ನನ್ನು ಆಶೀರ್ವದಿಸಿದರು. ನೀನು ಎಲ್ಲವನ್ನು ಅಬ್ರಾಹಮ್‌ಗೆ ಹೇಳಿದಿಯೋ ಇಲ್ಲವೋ ಎಂದು ಕೇಳಿದರು.

'ನಾನಾಗೇ ಏನೂ ಹೇಳಲಿಲ್ಲ, ಆದರೆ ಅವನಿಗೆ ಸ್ವಲ್ಪ ಅನುಮಾನ ಬಂದಿದೆ ಎಂದು ಅನ್ನಿಸುತ್ತದೆ.'

'ಜೀವನ ಸಂದೇಹ, ರಹಸ್ಯ ಮತ್ತು ಪಿತೂರಿಗಳಲ್ಲಿ ನಡೆಯಬಾರದು. ಅವನಿಗೆ ಕೂಡಲೇ ಎಲ್ಲವನ್ನೂ ಹೇಳಿಬಿಡು. ಅವನಿಂದ ವಿಚ್ಛೇದನವನ್ನು ಪಡೆಯದೆ ನೀನು ಲಾರ್ಸ್‌ನನ್ನು ವಿವಾಹವಾಗಲಾರೆ' ಮೌರೀನ್ ನನಗೆ ಸಲಹೆಯಿತ್ತರು.